# ನೇಪಾಳ : ಜನಪರ ಬದಲಾವಣೆ ಬರಲಿದೆಯೇ?

ಹಿಮಾಲಯ ತಪ್ಪಲಿನ ಮೂರುವರೆ ಕೋಟಿ ಜನಸಂಖ್ಯೆಯ ಪುಟ್ಟ ದೇಶ ನೇಪಾಳ ಕಳೆದ ಹನ್ನೆರಡು ವರ್ಷಗಳಿಂದ ಜಗತ್ತಿನ ಗಮನವನ್ನು ತನ್ನೆಡೆಗೆ ಸೆಳೆದಿದೆ. 1996ರಲ್ಲಿ ಅಲ್ಲಿ ಮಾವೋವಾದಿಗಳು ಪ್ರಜಾಯುದ್ಧ ಆರಂಭಿಸಿದಂದಿನಿಂದ ನಿರಂತರವಾಗಿ ನೇಪಾಳ ಸುದ್ದಿ ಮಾಡುತ್ತಲೇ ಬರುತ್ತಿದೆ. 240 ವರ್ಷಗಳ ರಾಜಸತ್ತೆಯನ್ನು ಕಿತ್ತೊಗೆದು ಪ್ರಜಾತಾಂತ್ರಿಕ ಗಣರಾಜ್ಯ ಸ್ಥಾಪನೆಯ ಕಾರ್ಯಸೂಚಿ ಇಟ್ಟುಕೊಂಡು 2007ರಲ್ಲಿ ಚುನಾವಣೆ ಕೂಡ ನಡೆದು ಮಾವೋವಾದಿಗಳು ಸರಳ ಬಹುಮತದಿಂದ ಆರಿಸಿ ಬಂದಿದ್ದಾರೆ. 1996ರಲ್ಲಿ ಕೆಲವೇ ಜನರು ಹಾಗೂ ಹಳೆಯದಾದ ಕೆಲವೇ ಶಸ್ತ್ರಗಳಿಂದ ಆರಂಭಿಸಿದ ಪ್ರಜಾಯುದ್ಧ 2006ರ ವೇಳೆಗೆ ಹತ್ತಾರು ಸಾವಿರ ಸಂಖ್ಯೆಯ ಪ್ರಜಾಸೇನೆ ನಿರ್ಮಿಸಿ ಸಾಕಷ್ಟು ಶಸ್ತ್ರಗಳನ್ನು ಹೊಂದಿತು. ದೇಶದ ಶೇಕಡಾ 80ಕ್ಕೂ ಹೆಚ್ಚು ಭಾಗದಲ್ಲಿ ಪರ್ಯಾಯ ಜನತೆಯ ಸರ್ಕಾರವನ್ನು ರಚಿಸಲಾಗಿತ್ತು. ಇದಕ್ಕೆಲ್ಲಾ ಸಿ.ಪಿ.ಎನ್ (ಮಾವೋವಾದಿ) ಪಕ್ಷ ನಾಯಕತ್ವ ನೀಡಿತು.

ಪ್ರಜಾಯುದ್ಧ ಬೆಳೆದಂತೆಲ್ಲಾ ದೇಶಾದ್ಯಂತ ಸಮೂಹ ಚಳುವಳಿಗಳು ಬಲಿಷ್ಠವಾದವು. ನೇಪಾಳಿ ಜನತೆ ಹಿಂದಿನ ಹಳಸಲು ವ್ಯವಸ್ಥೆಯನ್ನು ಕಿತ್ತೊಗೆಯಲು ತೀರ್ಮಾನಿಸಿದ್ದಷ್ಟೆ ಅಲ್ಲದೆ ಪರ್ಯಾಯ ವ್ಯವಸ್ಥೆಯನ್ನೂ ಕಟ್ಟಲು ಕಟಿಬದ್ಧರಾದರು. ಅದರ ಪರಿಣಾಮವೇ ದೇಶದ ಶೇ. 80 ಭಾಗದಲ್ಲಿ ರಚನೆಯಾದ ಪ್ರಜಾ ಸರ್ಕಾರಗಳು.

ಭಾರತದ ಹಾಗೂ ಅಂತರರಾಷ್ಟ್ರೀಯ ಬಂಡವಾಳದ ಕಪಿಮುಷ್ಟಿಯಡಿ ಪೋಷಿತವಾಗಿದ್ದ ನೇಪಾಳದ ರಾಜಸತ್ತೆಯಲ್ಲಿ ಬಿರುಕುಗಳು ಬೆಳೆದು ಅದು ಹಿಂದಿನ ದೊರೆ ಹಾಗೂ ಆತನ ಕುಟುಂಬದ ಕಗ್ಗೊಲೆಗೆ ಕಾರಣವಾಯಿತು. ನಂತರ ಬಂದ ದೊರೆ ಜ್ಞಾನೇಂದ್ರ ಆಡಳಿತದ ಎಲ್ಲಾ ರಂಗದ ಮೇಲೂ ತನ್ನ ಹಿಡಿತ ಬಿಗಿಗೊಳಿಸಲು ಆರಂಭಿಸಿದರೂ ನೇಪಾಳಿ ಜನತೆಯ ದೃಢ ಹೋರಾಟವನ್ನು ಎದುರಿಸಲಾಗದೆ ಹಿಂದ್ಸರಿಯಲೇ ಬೇಕಾಯಿತು. ಭಾರತ ಹಾಗೂ ಅಮೇರಿಕದ ಬೆಂಬಲ ಕೆಲಸಕ್ಕೆ ಬರಲಿಲ್ಲ. ಜನರಿಂದ ತಿರಸ್ಕೃತನಾದ ವ್ಯಕ್ತಿಯನ್ನು ರಾಜಸತ್ತೆಯಲ್ಲಿ ಮುಂದುವರಿಸುವುದರಿಂದ ಭಾರತದ ಟಾಟಾರಂತಹ ಬಂಡವಾಳಶಾಹಿಗಳಿಗಾಗಲಿ ಅಮೇರಿಕದ ಬಹುರಾಷ್ಟ್ರೀಯ ಕಂಪೆನಿಗಳಿಗಾಗಲಿ ನಷ್ಟವೇ ಹೊರತು ಲಾಭ ಏನಿಲ್ಲ. ಅವರಿಗೆ ಸಿಡಿದೆದ್ದಿರುವ ಜನರನ್ನು ಸಮಾಧಾನಪಡಿಸಿ ತಮ್ಮ ಆರ್ಥಿಕ ಹಿತಾಸಕ್ತಿಗೆ ಧಕ್ಕೆಯಾಗದಂತೆ ನೋಡಿಕೊಳ್ಳುವ ಪರ್ಯಾಯವೊಂದರ ಜರೂರತ್ತು ಉಂಟಾಯಿತು. ನಡೆಯುತ್ತಿರುವ ಸಶಸ್ತ್ರ ಹೋರಾಟವನ್ನು ಹೇಗಾದರೂ ಮಾಡಿ ಸ್ಥಗಿತಗೊಳಿಸಬೇಕಾದ ಅನಿವಾರ್ಯತೆ ಅಲ್ಲಿನ ಆಳುವ ಜನರಿಗೆ ಮತ್ತವರ ಅಂತರರಾಷ್ಟ್ರೀಯ ಪೋಷಕರಿಗೆ ಬಂದಿತು. ಇಲ್ಲದಿದ್ದಲ್ಲಿ ಅವರ ಸಕಲ ಹಿತಾಸಕ್ತಿಗಳೂ ಸ್ಥಗಿತಗೊಳ್ಳುವ ಪರಿಸ್ಥಿತಿ ಬರುತ್ತದೆ ಎಂಬುದು ಅವರಿಗೆ ಮನದಟ್ಟಾಗಿತ್ತು. ಮಾವೋವಾದಿ ಪಕ್ಷದ ಪ್ರಜಾಸೇನೆಯ ಬೆಳವಣಿಗೆ, ದೇಶದ ಶೇ. 80ರಷ್ಟು ಭಾಗದಲ್ಲಿ ಚಲಾವಣೆ ಆಗುತ್ತಿರುವ ಪರ್ಯಾಯ ಆಡಳಿತ ವ್ಯವಸ್ಥೆ ಅವರಿಗೆ ಇದನ್ನು ಅರ್ಥ ಮಾಡಿಸಿತ್ತು. ಸಮರದಲ್ಲಿರುವ ಜನರನ್ನು ತಹಬಂದಿಗೆ ತರಲು ದಾರಿ ಹುಡುಕುತ್ತಿದ್ದರು.

‘21ನೇ ಶತಮಾನದ ಪ್ರಜಾತಂತ್ರ’ ಹಾಗೂ ‘ಬಹುಪಕ್ಷೀಯ ಸ್ಪರ್ಧೆ’ಯ ಸೂತ್ರವನ್ನು ಪ್ರತಿಪಾದಿಸುತ್ತಾ ಬಂದ ಸಿಪಿಎನ್ (ಮಾವೋವಾದಿ) ಪಕ್ಷ ತನ್ನ ಕಾರ್ಯತಂತ್ರದ ಭಾಗವಾಗಿ ಅಲ್ಲಿನ ಪ್ರಮುಖ ರಾಜಕೀಯ ಪಕ್ಷಗಳನ್ನು ಒಂದೆಡೆ ಸೇರಿಸಿ ರಾಜಸತ್ತೆಯನ್ನು ಕಿತ್ತೊಗೆಯಲು ಪ್ರಯತ್ನಿಸುತ್ತಾ ಬಂದಿತು. ಆರಂಭದಲ್ಲಿ ರಾಜಕೀಯ ಪಕ್ಷಗಳು ಅದಕ್ಕೆ ಓಗೊಡಲಿಲ್ಲ. ನಂತರ ದೇಶದಲ್ಲಿ ಬೆಳೆಯುತ್ತಿರುವ ಪ್ರಜಾಯುದ್ಧದ ಒತ್ತಡ ಹಾಗೂ ಭಾರತ ಸೇರಿದಂತೆ ಅಂತರರಾಷ್ಟ್ರೀಯ ಆಳುವ ಜನಗಳ ಒತ್ತಡದಿಂದಾಗಿ ರಾಜಕೀಯ ಪಕ್ಷಗಳು ಮಾತುಕತೆಗೆ ಬಂದು 7 ಪಕ್ಷಗಳ ಮೈತ್ರಿಕೂಟ ನಿರ್ಮಾಣವಾಯಿತು. ರಾಜಸತ್ತೆಯನ್ನು ಕಿತ್ತೊಗೆಯುವುದು, ಚುನಾವಣೆ ನಡೆಸುವುದು, ಹೊಸ ಸಂವಿಧಾನ ರಚಿಸುವುದು, ಮಾವೋವಾದಿಗಳ ಹಿಡಿತದಲ್ಲಿರುವ ಸೈನ್ಯವನ್ನು ನಿಶಸ್ತ್ರಗೊಳಿಸುವುದು, ರಾಜನ ರಾಯಲ್ ನೇಪಾಳ ಆರ್ಮಿಯನ್ನು ಹಾಗೂ ಮಾವೋವಾದಿ ಪ್ರಜಾಸೇನೆಯನ್ನು ವಿಶ್ವಸಂಸ್ಥೆಯ ಮೇಲುಸ್ತುವಾರಿಯಲ್ಲಿ ಮುಂದಿನ ಪರ್ಯಾಯ ಆಗುವತನಕ ಬ್ಯಾರಕ್‌ಗಳಿಗೆ ಸೀಮಿತಗೊಳಿಸುವುದು, ರಕ್ಷಣೆಗೆ ಬೇಕಾದುದನ್ನು ಹೊರತುಪಡಿಸಿ ಎರಡು ಸೇನೆಯ ಶಸ್ತ್ರಗಳನ್ನು ಶಸ್ತ್ರಾಗಾರದಲ್ಲಿಟ್ಟು ಬೀಗದ ಕೀಗಳನ್ನು ವಿಶ್ವಸಂಸ್ಥೆ ಹಾಗೂ ಆಯಾ ಸೇನೆಯ ಮುಖ್ಯಸ್ಥರ ಬಳಿ ಒಂದೊಂದು ಇಟ್ಟುಕೊಳ್ಳುವುದು ಹೀಗೆ ಕೆಲವು ಒಡಂಬಡಿಕೆಗಳನ್ನು ಮಾಡಿಕೊಳ್ಳಲಾಯಿತು. ಇದರಲ್ಲಿ ಶೇ. 80 ಭಾಗದಲ್ಲಿದ್ದ ಸಿಪಿಎನ್‌ಎಂ ನೇತೃತ್ವದಲ್ಲಿನ ಪರ್ಯಾಯ ಸರ್ಕಾರಗಳ ರದ್ದತಿ ಕೂಡ ಸೇರಿತ್ತು. ಅದರಂತೆ ಸೇನೆ ಹಾಗೂ ಶಸ್ತ್ರಗಳನ್ನು ಬ್ಯಾರಕ್ಕಿಗೆ ಸರಿಸಿ ಚುನಾವಣೆ ನಡೆಸುವುದು, ಚುನಾವಣೆಯಲ್ಲಿ ಅಕ್ರಮ ನಡೆಸಿ ಮಾವೋವಾದಿಗಳನ್ನು ಹೊರತುಪಡಿಸಿ ಯಾವುದಾದರೊಂದು ಪಕ್ಷ ಪ್ರಧಾನವಾಗಿ ಕೊಯಿರಾಲ ನೇತೃತ್ವದ ನೇಪಾಳಿ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಬೇಕೆಂದು ಭಾರತ ಹಾಗೂ ಅಮೇರಿಕ ತಂತ್ರ ಹೂಡಿದ್ದವು. ಮಾವೋವಾದಿಗಳನ್ನು ನಂತರ ಮಟ್ಟಹಾಕುವ ಯೋಜನೆ ಕೂಡ ಇತ್ತು. ಆದರೆ ಅವರೆಣಿಕೆ ತಪ್ಪಿ ಮಾವೋವಾದಿಗಳು ಸರಳ ಬಹುಮತ ಗಳಿಸಿದರು. ನೇಪಾಳಿ ಕಾಂಗ್ರೆಸ್‌ನ ಹುನ್ನಾರದ ಚುನಾವಣಾ ಅಕ್ರಮ ನಡೆಯದಂತೆ ಪ್ರಜಾ ಸಂಘಟನೆಗಳು ನೋಡಿಕೊಂಡವು.

ಈ ಚುನಾವಣಾ ವಿಜಯ 10 ವರ್ಷಗಳ ಕಾಲದ ಪ್ರಜಾಯುದ್ಧ ಹಾಗೂ 19 ದಿನಗಳ ಸಮೂಹ ಚಳುವಳಿಯ ಫಲ ಎಂದು ಸಿಪಿಎನ್ (ಮಾವೋವಾದಿ) ಪಕ್ಷ ಹೇಳಿತ್ತು. ಭಾರತದ ಸಿಪಿಐ (ಮಾವೋವಾದಿ) ಪಕ್ಷ ನೇಪಾಳದಲ್ಲಿ ಅಳವಡಿಸುತ್ತಿರುವ ಕಾರ್ಯತಂತ್ರ ಅಪಾಯಕಾರಿಯಾದುದು ಎಂದು ಹೇಳಿತು. ಸಿಪಿಎನ್ (ಎಂ) ನಾಯಕತ್ವ ಸರ್ಕಾರ ರಚಿಸಿ ಆಡಳಿತ ನಡೆಸುವಲ್ಲಿ ಭಾಗವಾಗದೆ ಪರ್ಯಾಯ ಪ್ರಜಾಧಿಕಾರದ ಅಂಗಗಳನ್ನು ಬಲಿಷ್ಠಗೊಳಿಸುವ ಕಡೆ ಪೂರ್ತಿ ಗಮನ ನೀಡಬೇಕೆಂದು ಸಲಹೆ ಮಾಡಿತು. ಪರ್ಯಾಯ ಸರ್ಕಾರವನ್ನು ಬುಡದಿಂದ ಮತ್ತಷ್ಟು ಬಲಿಷ್ಠಗೊಳಿಸುತ್ತ ನವ ಪ್ರಜಾಪ್ರಭುತ್ವ ವ್ಯವಸ್ಥೆಯಾಗಿ ದೇಶವನ್ನು ಮಾರ್ಪಡಿಸಬೇಕೆಂದು, ಪ್ರಜಾಯುದ್ಧವನ್ನು ಬಲಿಷ್ಠಗೊಳಿಸಬೇಕೆಂದು ಸಲಹೆ ನೀಡಿತು. ಹಳೇ ಆಡಳಿತದ ಅಧಿಕಾರದ ಅಂಗಗಳನ್ನು ಬದಲಾಯಿಸದೇ ಇದ್ದಲ್ಲಿ ಜನರಿಗೆ ಪ್ರಜಾಯುದ್ಧದ ಫಲ ನಷ್ಟವಾಗುತ್ತದೆ ಎಂದು ಅಭಿಪ್ರಾಯಪಟ್ಟಿತು. ಆಳುವ ವರ್ಗದ ಪಕ್ಷಗಳೊಂದಿಗೆ ಸ್ಪರ್ಧೆ ನಡೆಸುವ ಬಹುಪಕ್ಷೀಯ ಸ್ಪರ್ಧೆಯ ಪರಿಕಲ್ಪನೆ ಜನರಿಗೆ

ಮುಳುವಾಗುತ್ತದೆ ಎಂದಿತು. ಯಾರೇ ಆದರೂ, ಎಷ್ಟೇ ಪ್ರಾಮಾಣಿಕತೆ ಬದ್ಧತೆ ಇದ್ದರೂ ಮೇಲಿನಿಂದ ಜನಪರ ವ್ಯವಸ್ಥೆಯೊಂದನ್ನು ನಿರ್ಮಿಸಲು ಸಾಧ್ಯವೇ ಇಲ್ಲ. ಅದನ್ನು ತಳಮಟ್ಟದಿಂದ ಕಟ್ಟಿ ಬೆಳೆಸಬೇಕಾಗುತ್ತದೆ. ಮೇಲಿನಿಂದ ನಿರ್ಮಿಸಲು ಹೋದ ಪ್ರಾಮಾಣಿಕ ಕಮ್ಯೂನಿಸ್ಟ್ ಪಕ್ಷಗಳು ನಂತರ ನಿಷ್ಕ್ರಿಯವಾಗಿ ಹಾದಿ ತಪ್ಪಿ ಇಲ್ಲವೆ ಕಗ್ಗೊಲೆಗೀಡಾದ ಉದಾಹರಣೆಗಳು ಜಗತ್ತಿನಲ್ಲಿ ಸಾಕಷ್ಟಿವೆ ಎಂದು ಪ್ರಪಂಚದ ಹಲವು ಮಾವೋವಾದಿ ಕಮ್ಯೂನಿಸ್ಟ್ ಪಕ್ಷಗಳು ಅಭಿಪ್ರಾಯಪಟ್ಟವು. ಈ ಚರ್ಚೆಗಳೂ ಈಗಲೂ ನಡೆಯುತ್ತಿವೆ.

ಇದೇ ವೇಳೆಯಲ್ಲಿ ಸಿಪಿಎನ್ (ಎಂ) ಸರ್ಕಾರ ರಚಿಸಿ ಪಕ್ಷದ ಅಧ್ಯಕ್ಷ ಪ್ರಚಂಡ ಇಂದು ನೇಪಾಳದ ಪ್ರಧಾನಿ ಆಗಿದ್ದಾರೆ. ಈ ಸರ್ಕಾರದಲ್ಲಿ 24 ಪಕ್ಷಗಳಿವೆ. ಕೊಯಿರಾಲರ ನೇಪಾಳಿ ಕಾಂಗ್ರೆಸ್ ಸರ್ಕಾರದಿಂದ ಹೊರಗೆ ಇದೆ. ಸಿಪಿಎನ್ (ಎಂ), ಸಿಪಿಎನ್ (ಯು.ಎಂ.ಎಲ್) ಹಾಗೂ ಮಾದೇಶಿ ಜನಾಧಿಕಾರ ಫೋರಂ ಎಂಬ ಮೂರು ಪಕ್ಷಗಳು ಸರ್ಕಾರದಲ್ಲಿ ಮುಖ್ಯ ಪಾತ್ರ ವಹಿಸುತ್ತಿವೆ.

ಸಿಪಿಎನ್ (ಯು.ಎಂ.ಎಲ್) ಅನ್ನು ಪರಿಷ್ಕರಣವಾದಿಗಳೆಂದು ಭಾರತದ ವಿಸ್ತರಣಾವಾದದ ಪರವಾಗಿರುವವರೆಂದೂ ವ್ಯಾಖ್ಯಾನಿಸಲಾಗುತ್ತಿದೆ. ಮಾದೇಶಿ ಜನಾಧಿಕಾರ ಫೋರಂನಲ್ಲಿ ಭಾರತದ ಹಿಂದೂವಾದಿ ಬಿಜೆಪಿಯ ಸಖ್ಯ ಹಾಗೂ ಬೆಂಬಲ ಇರುವವರು ಇದ್ದಾರೆಂದು ಹೇಳಲಾಗುತ್ತಿದೆ. ಮಾದೇಶಿ ಸಂಘಟನೆ ಈ ಹಿಂದೆ ನಡೆಸಿದ ನರಮೇಧಕ್ಕೆ ಭಾರತದ ವಿಶ್ವ ಹಿಂದೂ ಪರಿಷತ್‌ನ ಮಾರ್ಗದರ್ಶನ ಹಾಗೂ ಚಿತಾವಣೆಯೇ ಕಾರಣವೆಂಬುದು ಸ್ಪಷ್ಟವಾಗಿದೆ. ಉಳಿದ ಪಕ್ಷಗಳು ಒಂದಲ್ಲಾ ಒಂದು ರೀತಿಯಲ್ಲಿ ಭಾರತ ಇಲ್ಲವೇ ಇತರೆ ಅಂತರರಾಷ್ಟ್ರೀಯ ಲೂಟಿಕೋರರ ಪರವಾಗಿ ಇರುವವರೆ ಆಗಿದ್ದಾರೆ. ಸಿಪಿಎನ್‌ಎಂ ಪಕ್ಷ ಹೇಗಾದರೂ ಮಾಡಿ ನೇಪಾಳಿ ಕಾಂಗ್ರೆಸ್ ಅನ್ನು ಸರ್ಕಾರದ ಭಾಗವಾಗಿ ಮಾಡಬೇಕೆಂದು ಈಗಲೂ ಪ್ರಯತ್ನ ನಡೆಸುತ್ತಿದೆ.

ಪ್ರಚಂಡ ನೇತೃತ್ವದಲ್ಲಿನ ಸರ್ಕಾರ ವಿದೇಶೀ ಹೂಡಿಕೆಗೆ ಅವಕಾಶ ನೀಡುವುದಾಗಿ ಹೇಳಿದೆ. ಅದು ದೇಶದ ಅಭಿವೃದ್ಧಿಗೆ ಅವಶ್ಯವಾಗಿದೆ ಎಂದು ಸ್ಪಷ್ಟಪಡಿಸಿದೆ. ನೇಪಾಳದ ಮಾವೋವಾದಿಗಳು ಅಳವಡಿಸುತ್ತಿರುವ ಕಾರ್ಯತಂತ್ರವು ಅಂತರರಾಷ್ಟ್ರೀಯವಾಗಿ ತೀವ್ರ ಚರ್ಚೆ, ಟೀಕೆಗಳಿಗೆ ಗುರಿಯಾಗುತ್ತಿದೆ. ಇತ್ತೀಚೆಗೆ ಸಿರಾಹ ಜಿಲ್ಲೆಯ ಮಿರ್ಚಯ್ಯಾ ಎಂಬ ಪ್ರದೇಶದಲ್ಲಿ ವಸತಿ ಮತ್ತು ಭೂಹೀನರ ಮೇಲೆ ಪೊಲೀಸ್ ದಮನಕಾಂಡ ನಡೆಯಿತು. ಪೊಲೀಸ್ ಖಾತೆ ಹೊಂದಿರುವ ಮಂತ್ರಿ ಬಾಮ್‌ದೇವ್ ಗೌತಮ್ ಸಿಪಿಎನ್-ಯುಎಂಎಲ್ ಪಕ್ಷಕ್ಕೆ ಸೇರಿದವರು. ಅವರ ನಿರ್ದೇಶನದಲ್ಲೇ ಇದು ನಡೆದಿದೆ. ಇದನ್ನು ತಡೆಯಬೇಕೆಂದು ಪ್ರಯತ್ನಿಸಿದ ಭೂಸುಧಾರಣೆಯ ಜವಾಬ್ದಾರಿ ಇರುವ ಮಾವೋವಾದಿ ಪಕ್ಷದ ಮೈತ್ರಿಕಾ ಯಾದವ್‌ರ ಮಾತುಗಳಿಗೆ ಕವಡೆ ಕಾಸಿನ ಬೆಲೆ ಸಿಗದೇ ಹೋಯಿತು. ಮಾವೋವಾದಿಗಳ ನೇತೃತ್ವದಲ್ಲಿರುವ ಗೃಹಮಂತ್ರಿಯೇ ಮಾವೋವಾದಿ ಭೂ ಸುಧಾರಣಾ ಮಂತ್ರಿಯ ಮಾತುಗಳನ್ನು ಕಾಲಕಸದಂತೆ ಕಂಡರು. ಇದಾದ ನಂತರ ಭೂ ಸುಧಾರಣಾ ಮಂತ್ರಿ ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ತಾನು ಜನರೊಂದಿಗೆ ಇರುತ್ತೇನೆ, ಜನರು ಈಗಲೂ ಪೊಲೀಸ್ ದೌರ್ಜನ್ಯಗಳನ್ನು ಎದುರಿಸುತ್ತಿರುವಾಗ ನಾನು ಮಂತ್ರಿಗಿರಿಯಲ್ಲಿದ್ದೂ ಏನೂ ಮಾಡಲಾಗದೇ ಇರುವ ಪರಿಸ್ಥಿತಿ ಇದೆ ಎಂದರೆ ಅಂತಹ ಮಂತ್ರಿ ಸ್ಥಾನ ನನಗೆ ಬೇಡ ಎಂದು ತಿರಸ್ಕರಿಸಿದ್ದಾರೆ.

ನೇಪಾಳದ ಉಪಪ್ರಧಾನಿಗಳಲ್ಲಿ ಒಬ್ಬರಾದ ಮಾವೋವಾದಿ ಪಕ್ಷಕ್ಕೆ ಸೇರಿದ ಡಾ. ಬಾಬುರಾಮ್ ಭಟ್ಟಾರಾಯ್ 2008-09ರ ಆಯವ್ಯಯ ಮಂಡಿಸಿದ್ದರಲ್ಲಿ ಹೆಚ್ಚು ಪಾಲು ವಿದೇಶೀ ನೆರವು, ಸಾಲ ಹಾಗೂ ಅನುದಾನವನ್ನೇ ಅವಲಂಬಿಸಲಾಗಿದೆ. 236 ಬಿಲಿಯನ್ ರೂಪಾಯಿಗಳ ಒಟ್ಟು ಆಯವ್ಯಯದಲ್ಲಿ ವಿದೇಶಿ ನೆರವು 65 ಬಿಲಿಯನ್ ರೂಪಾಯಿಗಳು, ವಿದೇಶಿ ಅನುದಾನ 47.09 ರೂಪಾಯಿಗಳು, ವಿದೇಶಿ ಸಾಲ 18.70 ಬಿಲಿಯನ್ ರೂಪಾಯಿಗಳು, 41.11 ಬಿಲಿಯನ್ ರೂಪಾಯಿಗಳ ಕೊರತೆ ಇದೆ. ಉಳಿದದ್ದು ಸ್ಥಳೀಯ ಸಂಪನ್ಮೂಲದಿಂದ ಹೊಂದಿಸಲಾಗುತ್ತದೆ ಎನ್ನಲಾಗಿದೆ.

ಇದೀಗ ನೇಪಾಳ 'ಪ್ರಜಾತಾಂತ್ರಿಕ ಗಣರಾಜ್ಯ' ಆಗಬೇಕೋ, 'ಜನತೆಯ ಪ್ರಜಾತಾಂತ್ರಿಕ ಗಣರಾಜ್ಯ' ಆಗಬೇಕೋ ಎಂಬ ವಿಚಾರದ ಬಗ್ಗೆ ಮಾವೋವಾದಿ ಪಕ್ಷದೊಳಗೆ ಗಂಭೀರ ಚರ್ಚೆ ನಡೆಯುತ್ತಿದೆ. ಪ್ರಧಾನಿ ಪ್ರಚಂಡ ಈಗಿನ ಘಟ್ಟ ಬಂಡವಾಳಶಾಹಿ ಪ್ರಜಾತಾಂತ್ರಿಕ ಗಣರಾಜ್ಯ ಹಾಗಾಗಿ ಅದನ್ನು ರೂಪಿಸಬೇಕು ಎಂದಿದ್ದಾರೆ. ಉಪಪ್ರಧಾನಿ ಬಾಬುರಾಮ್ ಭಟ್ಟರಾಯ್ ಕೂಡ ಇದೇ ಅಭಿಪ್ರಾಯ ಹೊಂದಿದ್ದಾರೆ. ಆದರೆ ಮೋಹನ್ ಬೈದ್ಯ ಎಂಬ ಮತ್ತೊಬ್ಬ ಹಿರಿಯ ಕೇಂದ್ರ ಸಮಿತಿ ಸದಸ್ಯರು ನೇಪಾಳವನ್ನು ಜನತೆಯ ಪ್ರಜಾತಾಂತ್ರಿಕ ಗಣರಾಜ್ಯವಾಗಿ ರೂಪಿಸಬೇಕು, ಹಾಗಾದಾಗ ಮಾತ್ರ ನವ ಪ್ರಜಾತಾಂತ್ರಿಕ ಕ್ರಾಂತಿ ನಂತರ ಸಮಾಜವಾದಿ ಕ್ರಾಂತಿಯತ್ತ ಹೋಗಲು ಸಾಧ್ಯವಾಗುತ್ತದೆ, ಇಲ್ಲದಿದ್ದಲ್ಲಿ ಬಂಡವಾಳಶಾಹಿ ಗಣರಾಜ್ಯವಾಗಿ ಉಳಿದುಬಿಡುವ ಅಪಾಯ ಇರುತ್ತದೆ, ಇದು ಸರಿಯಾದುದಲ್ಲ ಎಂದು ಪ್ರತಿಪಾದಿಸಿದ್ದಾರೆ. ಮೋಹನ್ ಬೈದ್ಯರ ಈ ಪ್ರತಿಪಾದನೆಗೆ ಸಿಪಿಎನ್‌ಎಂ ಪಕ್ಷದಲ್ಲಿ ಹೆಚ್ಚು ಬೆಂಬಲ ಇದೆ ಎಂದು ಹೇಳಲಾಗುತ್ತಿದೆ. ಇನ್ನೊಂದು ವಿವಾದ ಮಾವೋವಾದಿ ಎಂಬ ಪಟ್ಟಿ ಇನ್ನು ಮುಂದೆ ಅಗತ್ಯ ಇಲ್ಲ ಎಂಬ ವಾದವನ್ನು ಸ್ವತಃ ಪ್ರಚಂಡ ಹಾಗೂ ಭಟ್ಟರಾಯ್ ಮುಂದಿಟ್ಟಿದ್ದಾರೆ. ಈ ಹಿಂದೆ ಪ್ರಜಾಯುದ್ಧವನ್ನು ವಿರೋಧಿಸುತ್ತಾ ಬಂದಿದ್ದ ನೇಪಾಳದ ಕೆಲವು ಕಮ್ಯೂನಿಸ್ಟ್ ಪಕ್ಷಗಳನ್ನು ಸಿಪಿಎನ್‌ಎಂ ಒಳಗೆ ಸೇರಿಸಿಕೊಳ್ಳಲು ಇದನ್ನು ಮುಂದಿಡಲಾಗಿದೆ ಎಂಬ ಸುದ್ದಿ ಇದೆ. ಅಂತರರಾಷ್ಟ್ರೀಯ ನೆರವು ಪಡೆದುಕೊಳ್ಳಲು ಅನುಕೂಲವಾಗುತ್ತದೆ ಎಂಬುದೇ ಇದರ ಹಿಂದಿರುವ ಒಂದು ಕಾರಣ ಎಂಬ ಚರ್ಚೆ ನಡೆದಿದೆ. ಇದು ಹಲವರ ಹುಬ್ಬೇರುವಂತೆ ಮಾಡಿದೆ. ಇದಕ್ಕೆ ಪಕ್ಷದೊಳಗೆ ಸಾಕಷ್ಟು ವಿರೋಧ ಬಂದಿದೆ. ಇದನ್ನು ವಿರೋಧಿಸಿ ಮಾವೋವಾದಿ ಎಂಬುದು ಪಟ್ಟಿಯಲ್ಲ ಅದು ನಮ್ಮ ಗುರುತು, ಮಾರ್ಗದರ್ಶಿ ಸಿದ್ಧಾಂತ ಎಂದು ಮೋಹನ್ ಬೈದ್ಯ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಅಮೇರಿಕದ ಸಭೆಯೊಂದರಲ್ಲಿ ಡಾ. ಬಾಬುರಾಮ್ ಭಟ್ಟರಾಯ್ ಆಡಿದ ಮಾತು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿವಾದ ಹುಟ್ಟುಹಾಕಿದೆ. ಅದೇನೆಂದರೆ ಅವರು ಮಾತನಾಡುತ್ತಾ "ಲೆನಿನ್ ಮತ್ತೊಂದು ಹತ್ತು ವರ್ಷ ಬದುಕಿರುತ್ತಿದ್ದರೆ ಬಹುಪಕ್ಷೀಯ ಸ್ಪರ್ಧೆ ಮತ್ತು ಬಹುಪಕ್ಷೀಯ ಪ್ರಜಾತಂತ್ರವನ್ನೇ ಪ್ರತಿಪಾದಿಸುತ್ತಿದ್ದರು" ಎಂದು ಹೇಳಿರುವುದು. ಇದು ಲೆನಿನ್‌ರ ವಿಚಾರಧಾರೆಗೆ ವಿರುದ್ಧವಾದುದು. ಲೆನಿನ್ ಪ್ರತಿಪಾದಿಸಿದ್ದು ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು. ಅಂದರೆ ಬಹುಸಂಖ್ಯಾತ ಶೋಷಿತ ವರ್ಗ ಅಲ್ಪಸಂಖ್ಯಾತ ಶೋಷಕ ವರ್ಗಗಳ ಮೇಲೆ ಅಧಿಕಾರ ಚಲಾಯಿಸುವುದು ಎಂಬುದಾಗಿದೆ ಎಂದು ಹಲವರು ತಕರಾರು ತೆಗೆದಿದ್ದಾರೆ.

ಇನ್ನೊಂದು ಮುಖ್ಯ ವಿಚಾರ ಮಾವೋವಾದಿಗಳ ಸೇನೆ ಹಾಗೂ ಹಿಂದಿನ ರಾಜನ ಸೇನೆಯನ್ನು ವಿಲೀನಗೊಳಿಸಿ ಹೊಸ ರಾಷ್ಟ್ರೀಯ ಸೇನೆಯನ್ನು ರಚಿಸಲು ಸಿಪಿಎನ್‌ಎಂ ನೇತೃತ್ವದ ಸರ್ಕಾರ ಮುಂದಾಗಿದೆ. ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಗಿ ಅದರಲ್ಲಿ ಯು.ಎಂ.ಎಲ್ ಹಾಗೂ ಮಾದೇಶಿ ಜನಾಧಿಕಾರ ಫೋರಂನ ಪ್ರತಿನಿಧಿಗಳು ಕೂಡ ಇದ್ದಾರೆ. ಇದಕ್ಕೆ ರಾಯಲ್ ನೇಪಾಳ ಆರ್ಮಿ (ಆರ್.ಎನ್.ಎ) ಹಾಗೂ ನೇಪಾಳಿ ಕಾಂಗ್ರೆಸ್ ತೀವ್ರ ವಿರೋಧ ವ್ಯಕ್ತಪಡಿಸಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಇದರ ಯುಕ್ತಾಯುಕ್ತತೆ ಬಗ್ಗೆ ಸಾಕಷ್ಟು ಪ್ರಶ್ನೆಗಳೆದ್ದಿವೆ. ಊಳಿಗಮಾನ್ಯ ರಾಜನ ಆಜ್ಞಾಧಾರಕರಾಗಿರಲು ರಚನೆಯಾದ ಆರ್‌ಎನ್‌ಎ ಹೇಗೆ ತನ್ನ ಗುಣವನ್ನು ಬದಲಾಯಿಸಿಕೊಳ್ಳಲು ಸಾಧ್ಯ? ಅದು ಹೇಗೆ ರಾಷ್ಟ್ರೀಯ ಪ್ರಜ್ಞೆ ಗಳಿಸಿ ನೇಪಾಳಿ ಜನರ ಸೇವೆಗೆ ನಿಲ್ಲುತ್ತದೆ? ಪ್ರಜಾಯುದ್ಧದ ಮೂಲಕ ಬೆಳೆದು ಬಂದ ಪ್ರಜಾ ವಿಮೋಚನಾ ಸೇನೆಯನ್ನು ಆರ್‌ಎನ್‌ಎದೊಂದಿಗೆ ಸೇರಿಸಿ ಹೊಸ ರಾಷ್ಟ್ರೀಯ ಸೇನೆ ನಿರ್ಮಿಸುವುದು ಕಾರ್ಯಸಾಧುವೇ, ಹಾಗೊಂದು ವೇಳೆ ಮಾಡಿದರೂ ಅದಕ್ಕೆ ರಾಜನಿಷ್ಠೆ, ಭಾರತ ಮತ್ತು ಅಂತರರಾಷ್ಟ್ರೀಯ ಹಣಕಾಸು ಪರ ನಿಷ್ಠೆ ಹೋಗಿ ನೇಪಾಳಿ ರಾಷ್ಟ್ರ ನಿಷ್ಠೆ ಬಂದುಬಿಡುತ್ತದೆಯೆ ಇತ್ಯಾದಿ ಪ್ರಶ್ನೆಗಳು ಗಂಭೀರ ಚರ್ಚೆಗೆ ಒಳಗಾಗುತ್ತಿವೆ. ಸಿಪಿಎನ್ ಮಾವೋವಾದಿಯ ಕೇಂದ್ರ ಸಮಿತಿಯೂ ಸೇರಿದಂತೆ ಪಕ್ಷದೊಳಗೇ - ಅಧಿಕಾರ ಇನ್ನೂ ಸಿಕ್ಕಿಲ್ಲ, ಕೇವಲ ಕುರ್ಚಿಗಳು ಸಿಕ್ಕಿವೆ ಅಷ್ಟೆ, ಬದಲಾವಣೆಗಳೇನೂ ಬಂದಿಲ್ಲ ಎಂಬ ಅಭಿಪ್ರಾಯಗಳು ಕೂಡ ಇವೆ.

ಹೇಗಾದರೂ ಮಾಡಿ ಪ್ರಜಾಯುದ್ಧವನ್ನು ಸ್ಥಗಿತಗೊಳಿಸಿ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಭಾಗವಾಗಿಯೇ ಮಾವೋವಾದಿಗಳನ್ನು ಚುನಾವಣೆಯಲ್ಲಿ ಭಾಗವಹಿಸಲು ಆಳುವ ವರ್ಗಗಳು ಅನುವು ಮಾಡಿದ್ದಾರೆ. ಮಾವೋವಾದಿಗಳ ನೇತೃತ್ವದ ಪ್ರಜಾಸೇನೆಯನ್ನು ನಿಷ್ಕ್ರಿಯಗೊಳಿಸುವ ಅಲ್ಲದೆ ಸ್ವತಃ ಸಿಪಿಎನ್ (ಮಾವೋವಾದಿ) ಪಕ್ಷವನ್ನು ದೇಶದ ಮುಂದಿರುವ ಎಲ್ಲಾ ಸಮಸ್ಯೆಗಳಿಗೆ ಹೊಣೆಗಾರರನ್ನಾಗಿ ಮಾಡಿ ಸಮಸ್ಯೆಗಳು ಪರಿಹಾರವಾಗದಂತೆ ತಡೆದು ಜನರಿಂದ ಮಾವೋವಾದಿಗಳನ್ನು ದೂರ ಮಾಡುವ, ಅದಾಗದಿದ್ದಲ್ಲಿ ಶಕ್ತಿಗುಂದಿಸುವ ತಂತ್ರಗಳೇ ಇವುಗಳ ಹಿಂದಿರುವುದು ಎಂಬ ವಾದಗಳು ಕೂಡ ನೇಪಾಳಿ ಮಾವೋವಾದಿಗಳ ಕಾರ್ಯತಂತ್ರದ ಕುರಿತು ಅಭಿಪ್ರಾಯ ಭೇದ ಇರುವ ಇಟಲಿ ಅಮೇರಿಕದಂತಹ ದೇಶಗಳ ಮಾವೋವಾದಿ ಪಕ್ಷಗಳು ಮುಂದಿಟ್ಟಿವೆ.

ಈಗ ಸಿಪಿಎನ್‌ಎಂ ಪಕ್ಷ ಕಾಂಗ್ರೆಸ್ ನಡೆಸಲು ಹೊರಟಿದೆ. 2009ರ ಜನವರಿಯಲ್ಲಿ ನಡೆಯುವ ಈ ಕಾಂಗ್ರೆಸ್ಸಿನಲ್ಲಿ ಎರಡು ಪಥದ ಸಂಘರ್ಷ ಬಿರುಸಿನಿಂದ ನಡೆಯುವ ಸೂಚನೆಗಳಿವೆ.

ನೇಪಾಳದಲ್ಲಿ ಆಗುತ್ತಿರುವ ಬದಲಾವಣೆಗಳು ಜನರಿಗೆ ಒಂದು ಪ್ರಜಾತಾಂತ್ರಿಕ ನಂತರ ಸಮಾಜವಾದಿ ವ್ಯವಸ್ಥೆ ನಿರ್ಮಿಸುವತ್ತ ಹೆಜ್ಜೆ ಹಾಕಬಹುದೇ ಎಂಬುದನ್ನು ಕಾದು ನೋಡಬೇಕಿದೆ.

ಸ್ವಾಮಿ ಎಂ.ಎಸ್

ನವೆಂಬರ್ 10/2008